# ಹರಿಪ್ರಿಯಾ 25 ಹೆಜ್ಜೆ!

**ಸದ್ಯ ಕನ್ನಡದ ಬಹುಬೇಡಿಕೆಯ ನಟಿ ಯಾರು ಎಂದರೆ ಥಟ್ಟನೆ ಹೊಳೆಯುವ ಹೆಸರು ಹರಿಪ್ರಿಯಾ. ಅವರ ಕೈಯಲ್ಲಿರುವ ಸಾಲು ಸಾಲು ಸಿನಿಮಾಗಳೇ ಇದಕ್ಕೆ ಕಾರಣ. ಹದಿನಾರನೇ ವಯಸ್ಸಿನಲ್ಲಿಯೇ ನಟನೆಗೆ ತೊಡಗಿದ ಅವರ 25ನೇ ಚಿತ್ರ 'D/O ಪಾರ್ವತಮ್ಮ' ಮೇ 24ರಂದು ಬಿಡುಗಡೆಯಾಗುತ್ತಿದೆ.**

■ ಪದ್ಮನಾಭ ಭಟ್



**◆ 25ನೇ ಸಿನಿಮಾ ಇದೇ ಆಗಿರಬೇಕು ಎಂದು ನೀವು ಪ್ಲ್ಯಾನ್ ಮಾಡಿ ಒಪ್ಪಿಕೊಂಡಿದ್ದಾ?**

ನಾನು ಬದುಕಿನಲ್ಲಿ ಯಾವುದೂ ಪ್ಲ್ಯಾನ್ ಮಾಡಿಲ್ಲ. ನಾಯಕಿ ಆಗಬೇಕು ಎಂದೂ ಪ್ಲ್ಯಾನ್ ಮಾಡಿದವಳಲ್ಲ. ಚಿತ್ರರಂಗದಲ್ಲಿಯೇ ಉಳಿಯಬೇಕು ಎಂದುಕೊಂಡವಳೂ ಅಲ್ಲ. ಚಿತ್ರರಂಗವೇ ನನ್ನನ್ನು ಉಳಿಸಿಕೊಂಡಿತು. ನಂತರ ನಾನು ಚಿತ್ರರಂಗಕ್ಕೇ ಸೇರಿದವಳು, ಇಲ್ಲಿಯೇ ಏನಾದರೂ ಸಾಧಿಸಬೇಕು ಅಂತ ತುಂಬ ಅನಿಸಲಿಕ್ಕೆ ಶುರುವಾಯಿತು. ಕನ್ನಡ, ತೆಲುಗು, ತಮಿಳು, ಮಲಯಾಳಂ ಎಲ್ಲ ಭಾಷೆಗಳಲ್ಲಿಯೂ ನಟಿಸಿದೆ. ಆದರೆ ಲೆಕ್ಕ ಹಾಕಿಕೊಂಡು ನಟಿಸುತ್ತಿರಲಿಲ್ಲ. 'D/O ಪಾರ್ವತಮ್ಮ' ಸಿನಿಮಾ ನಿರ್ಮಾಪಕರೇ ಒಂದು ದಿನ ಬಂದು 'ನಮ್ಮ ಸಿನಿಮಾ, ಕನ್ನಡದಲ್ಲಿ ನೀವು ಅಭಿನಯಿಸುತ್ತಿರುವ 25ನೇ ಸಿನಿಮಾ' ಎಂದು ಹೇಳಿದರು. ಅದನ್ನು ಕೇಳಿ ನನಗೆ ತುಂಬ ಖುಷಿಯಾಯ್ತು. ಈ ವಿಷಯ ತಿಳಿದು ನನಗಿಂತ ಚಿತ್ರತಂಡದವರೇ ಹೆಚ್ಚು ಸೆಲೆಬ್ರೇಟ್ ಮಾಡಿದರು.

**◆ 'D/O ಪಾರ್ವತಮ್ಮ' ಚಿತ್ರ ಒಪ್ಪಿಕೊಳ್ಳಲು ಮುಖ್ಯ ಕಾರಣಗಳೇನು?**

ಕಥೆ. ಇದೊಂದು ಮಹಿಳಾ ಪ್ರಧಾನ ಸಿನಿಮಾ ಅನ್ನುವ ಕಾರಣಕ್ಕೆ ಒಪ್ಪಿಕೊಂಡಿದ್ದಲ್ಲ. ಖಡಕ್ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎಂಬ ಆಸೆಯೇನೋ ಇತ್ತು. ಆದರೆ ಅದೊಂದೇ ಕಾರಣಕ್ಕೂ ಈ ಸಿನಿಮಾವನ್ನು ಒಪ್ಪಿಕೊಂಡಿಲ್ಲ. ಪೊಲೀಸ್ ಅಧಿಕಾರಿ ಪಾತ್ರ ಅಂದಾಕ್ಷಣ ಮಾಲಾಶ್ರೀ ಅವರು ಮಾಡಿದ ಆ್ಯಕ್ಷನ್ ಪಾತ್ರಗಳೇ ನೆನಪಾಗುತ್ತವೆ. ಅವರು ತುಂಬ ಚೆನ್ನಾಗಿ ಮಾಡುತ್ತಾರೆ. ಆದರೆ ಅವರು ಮಾಡುತ್ತಾರೆ ಎಂದು ನಾನೂ ಮಾಡಲು ಸಾಧ್ಯ ಎಂದು ನಾನು ಅಂದುಕೊಂಡಿಲ್ಲ. ಹಾಗಾಗಿ ಈ ಚಿತ್ರದಲ್ಲಿ ಆ್ಯಕ್ಷನ್‌ಗಿಂತಲೂ ಕಥೆಯೇ ಮುಖ್ಯವಾಗಿದೆ. ಉಳಿದೆಲ್ಲ ಸಂಗತಿಗಳೂ ಕಥೆಯ ಜೊತೆಗೆ ಅದರ ಅಗತ್ಯಕ್ಕೆ ತಕ್ಕ ಹಾಗೆಯೇ ಬರುತ್ತ ಹೋಗುತ್ತವೆ. ರೋಪ್ ಹಾಕಿ, ಇಲ್ಲಿಂದ ಅಲ್ಲಿ ಎಗರಿ ಹೊಡೆಯುವ ಸನ್ನಿವೇಶಗಳೆಲ್ಲ ಇಲ್ಲ. ಯಾಕೆಂದರೆ ನಾನು ಮಾಡುವ ಆ್ಯಕ್ಷನ್ ಜನರು ನಂಬುವ ಹಾಗಿರಬೇಕು. ನಾಯಕರು ಫೈಟ್ ಮಾಡುತ್ತಾರೆ ಎಂದರೆ ಅವರು ಬಾಡಿ ಬಿಲ್ಡ್ ಮಾಡುತ್ತಾರೆ. ಅವರಿಗೆ ಅಂಥದ್ದೊಂದು ಆ್ಯಕ್ಷನ್ ಇಮೇಜ್ ಇರುತ್ತದೆ. ನನಗೆ ಇರುವುದು ಮೃದು ಹುಡುಗಿಯ ಇಮೇಜ್. ಒಮ್ಮಿಂದೊಮ್ಮೆಲೆ ಹೋಗಿ ನಾಲ್ಕು ಜನರಿಗೆ ಹೊಡೆದೆ ಎಂದರೆ ಸ್ವಂತ ನನಗೂ ನಂಬಲಿಕ್ಕೆ ಕಷ್ಟ. ಹಾಗಾಗಿಯೇ ನಾವು ಆ್ಯಕ್ಷನ್ ಸನ್ನಿವೇಶಗಳನ್ನೂ ತುಂಬ ಸಹಜವಾಗಿಯೇ ವಿನ್ಯಾಸ ಮಾಡಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ಕಥೆಗೆ ಪ್ರಾಮುಖ್ಯತೆ ಕೊಟ್ಟಿದ್ದೇವೆ.

**◆ ಯಾವ ಥರದ ಕಥೆ ಇದು?**

ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥೆ. ಸಸ್ಪೆನ್ಸ್ ರಿವೀಲ್ ಆಗುವುದು ಕೊನೆಯಲ್ಲಿ. ಮೊದಲಿನಿಂದ ಕೊನೆಯವರೆಗೂ ಕುತೂಹಲ ಉಳಿಸಿಕೊಂಡು ಹೋಗುತ್ತದೆ. ತನಿಖಾಧಿಕಾರಿ ಎಂಬುದರ ಜೊತೆಗೆ ಆ ಪಾತ್ರದ ಪೋಷಣೆಯೂ ಚೆನ್ನಾಗಿದೆ.

**◆ ಈ ಪಾತ್ರಕ್ಕೆ ನಿಮ್ಮನ್ನು ನೀವು ಹೇಗೆ ಸಿದ್ಧಗೊಳಿಸಿಕೊಂಡಿರಿ?**

ಮೊದಲು ನನ್ನ ತಲೆಯಲ್ಲಿದ್ದಿದ್ದು, ಎಲ್ಲಿಯೂ ನಾನು ಕಷ್ಟಪಟ್ಟು ಆ್ಯಕ್ಟ್ ಮಾಡಿದೀನಿ ಅಂತ ಅನಿಸಬಾರದು ಎನ್ನುವುದು. ನನ್ನ ಮ್ಯಾನರಿಸಮ್ ಕೃತಕ ಅನಿಸಬಾರದು. ಯಾವುದೋ ಒಂದು ದೃಶ್ಯದಲ್ಲಿ ಕಷ್ಟಪಟ್ಟು ಒಂದು ಮ್ಯಾನರಿಸಮ್ ಮಾಡಿದೆ ಅಂದುಕೊಳ್ಳಿ, ಇಡೀ ಸಿನಿಮಾ ಅದನ್ನು ತೂಗಿಸಿಕೊಂಡು ಹೋಗಬೇಕಾಗುತ್ತದೆ. ಎಲ್ಲೋ ಒಂದು ಕಡೆ ಅದು ಕೃತಕ ಅನಿಸಿಬಿಡುತ್ತದೆ. ಹಾಗಾಗಿ ಯಾವುದೇ ಥರದ ಎಕ್ಸ್ಟ್ರಾ ಮ್ಯಾನರಿಸಮ್ ಇಲ್ಲದೆ,

ಚಿತ್ರ: ಅಭಿಷೇಕ್ ಎಸ್.ಎನ್.